(c)	Years.	Sales.
1	1965-66	2,98,961
2	1966-67	3,01,671
3	1967-68	4,28,651

ಶ್ರೀ ಎಸ್. ಎಸ್. ಅರಕೇರಿ.—ಇಲ್ಲಿ ಉತ್ತರದಲ್ಲಿ ದೆಹಲಿಯಲ್ಲಿರತಕ್ಕ ಕಾವೇರಿ ಎಂಪೋರಿಯಂನಲ್ಲಿ ಕನ್ನಡ ತಿಳಿದವರಿದ್ದಾರೆಂದು ಹೇಳಿರಾಗಿದೆ. ಆದರೆ ನಾನು ಮೊನ್ನೆ ಆಗಸ್ಟಿನಲ್ಲಿ ಅಲ್ಲಿಗೆ ಹೋಗಿದ್ದಾಗ ಅಲ್ಲಿ ಕನ್ನಡ ಮಾತನಾಡತಕ್ಕವರು ಒಬ್ಬರೂ ಇರಲಿಲ್ಲವಲ್ಲ? ಅವರನ್ನು ಅಲ್ಲಿ ಯಾವಾಗ ನೇಮಕ ಮಾಡಿಕೊಳ್ಳರಾಯಿತು ?

†ಶ್ರೀ ಎ. ಪಿ. ಅಪ್ಪಣ್ಣ.—ಆ 8 ಜನರಲ್ಲಿ ಕನ್ನಡ ಮಾತನಾಡತಕ್ಕವರು ಒಬ್ಬರು ಇದ್ದಾರೆ. ತಾವು ಬಹುಶಃ ಅವರೊಡನೆ ಕನ್ನಡದಲ್ಲಿ ಮಾತನಾಡಲಿಲ್ಲ ಎಂದು ಕಾಣುತ್ತದೆ.

ಶ್ರೀ ಎಸ್. ಎಸ್. ಅರಕೇರಿ.—ಆ ದೆಹಲಿಯಲ್ಲಿ ಅನೇಕ ರಾಜ್ಯಗಳವರು—ಗುಜರಾತಿನವರು ಹಾಗೂ ಮದ್ರಾಸಿನವರು—ಅಲ್ಲಿ ತಮ್ಮ ತಮ್ಮ ಎಂಪೋರಿಯಂಗಳಿಗೆ ತಮ್ಮ ರಾಜ್ಯದ ಹೆಸರನ್ನು ಇಟ್ಟುಕೊಂಡಿರುವಾಗ ನಮ್ಮ ಎಂಪೋರಿಯಂ ಒಂದನ್ನು ಮಾತ್ರ ಯಾರದೋ ಒತ್ತಾಯಕ್ಕೆ ಮಣಿದು ಕಾವೇರಿ ಎಂಪೋರಿಯಂ ಎಂದು ಇಟ್ಟಿರುವುದನ್ನು ಬದರಾಯಿಸಿ, ಅದಕ್ಕೆ ಮೈಸೂರು ಅಥವಾ ಕರ್ನಾಟಕ ಎಂಪೋರಿಯಂ ಎಂದು ಹೆಸರಿಡುತ್ತೀರಾ ?

ಶ್ರೀ ಎ. ಪಿ. ಅಪ್ಪಣ್ಣ.—ಕಾವೇರಿ ಮೈಸೂರನ್ನು ಉದ್ಧಾರ ಮಾಡತಕ್ಕ ಮಾತೆ. ಆದ್ದರಿಂದ ಅದನ್ನು ಬದರಾಯಿಸುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕಳೆದ 3 ವರ್ಷಗಳಿಂದ ಒಟ್ಟು ಎಷ್ಟು ರಾಭ ಬಂದಿದೆ ?

ಶ್ರೀ ಎ. ಪಿ. ಅಪ್ಪಣ್ಣ.—ಖಚಿತವಾದ ಅಂಕಿಯನ್ನು ತಿಳಿಸುವುದಕ್ಕಾಗದಿದ್ದರೂ ಸಾಕಷ್ಟು ರಾಭದಲ್ಲಿ ಕೆಲಸ ಮಾಡುತ್ತಿದೆ ಎಂದು ಧಾರಾಳವಾಗಿ ಹೇಳಬಹುದು.

Loans of Failed Wells

58. **Sri K. SANGANA GOWDA** (Lingsugur).—

Will the Minister for Revenue be pleased to state :—

(*a*) whether the G.O. No. RDF 44 TSW 63, dated 25th March 1964 of Revenue Department, Government of Mysore, is in force ;

(*b*) whether the concessions metioned in the said G.O. are given to the borrowers of loan in case of failed wells in Raichur district ;

(*c*) whether there is any proposal to investigate such cases of failed wells and give benefit of the said G.O. to the farmers in Raichur district ?

A.—**Sri H. V. KOUJALGI** (Minister for Revenue).—

(*a*) Yes.
(*b*) Yes.
(*c*) Yes.

ಶ್ರೀ ಕೆ. ಸಂಗನಗೌಡ.—ಅಜ್ಜಿ ಜಾರಿಯಲ್ಲಿದೆ ಎಂದು ಹೇಳಿದ್ದಾರೆ. ಆದರೆ ಇದರಿಂದ ನಮ್ಮ ರಾಯಚೂರಿನ ಜಿಲ್ಲೆಯವರಿಗೆಷ್ಟು ಅನುಕೂಲ ದೊರೆತಿದೆ ?

ಶ್ರೀ ಎಚ್. ಎ. ಕೌಜಲಗಿ.—ಅಲ್ಲಿಂದ ಒಟ್ಟು 8 ಕೇಸುಗಳು ಶಿಫಾರಸ್ಸಾಗಿ ಬಂದಿದ್ದವು. ಅವುಗಳಿಗೆ ಎಲ್ಲಕ್ಕೂ ಅನುಕೂಲಮಾಡಿದೆ.

ಶ್ರೀ ಕೆ. ನಂಗನಗೌಡ.—ನನಗೆ ತಿಳಿದಿರುವಂತೆ ಲಿಂಗಸೂಗುರು ತಾಲ್ಲೂಕಿನಲ್ಲಿ ಅಲ್ಲಿಯ ಜನರು ಕೊಡತಕ್ಕ ಅಪ್ಲಿಕೇಷನ್ ಅವಧಿ ನಿಧಾನವಾಗಿದೆ ಎಂದು ಅಲ್ಲಿ 8—10 ಅಪ್ಲಿಕೇಷನ್‌ಗಳನ್ನು ಸರ್ಕಾರದವರು ತಳ್ಳಿಹಾಕಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಅಂಥ ಪ್ರತ್ಯೇಕ ನಿದರ್ಶನಗಳಿದ್ದಲ್ಲಿ ನನ್ನ ಗಮನಕ್ಕೆ ತಂದರೆ ಅದನ್ನು ಪರಿಶೀಲನೆ ಮಾಡಲಾಗುತ್ತದೆ.

Sri V. N. PATIL.—May I know whether Government would issue direction to all the Deputy Commissioners and Tahsildars to strictly implement the G.O.?

Sri H. V. KOUJALGI.—It is strictly enforced but it is for the parties to approach the authorities concerned.

ಶ್ರೀ ಇ. ಪುಂಡಲೀಕಪ್ಪ.—ರಾಯಚೂರು ಜಿಲ್ಲೆಯ ಕೆಲವು ಬಾವಿಗಳಲ್ಲಿ ನೀರು ಬಿದ್ದಿಲ್ಲವೆನ್ನುವ ಬಗ್ಗೆ ಈಗಾಗಲೇ ಎಷ್ಟು ಅರ್ಜಿಗಳು ಬಂದಿವೆ ?

ಶ್ರೀ ಎಚ್. ವಿ. ಕೌಜಲಗಿ.—8 ಅರ್ಜಿಗಳು ಬಂದಿವೆ.

Construction of Varuna Channel to K. R. Sagar

60. Sri N. A. CHANNEGOWDA (Pandavapura).—

Will the Chief Minister be pleased to state :—

(*a*) whether they have appointed a Committee to consider the availability of water to the right bank high level (Varuna) Channel proposed to be constructed to Krishnarajasagar and other matters;

(i) if so, when it was appointed ;
(ii) if its report is received, when it was submitted ;
(iii) who are the members of the Committee ;

(*b*) the Number of members of that Committee who have toured in Visweshwaraiah Channel area affected by the proposed Channel ;

(*c*) whether a special Officer was appointed to provide statistics to this Committee ;

(*d*) whether the Chief Engineer for Major Irrigation (South) has tourned in Visweswaraiah channel area to get the opinion of the people of that area, who would suffer from the proposed Varuna Channel and submitted a report ;

(*e*) whether the report of the above Committee and that of the Chief Engineer would be placed on the Table of the House ;

(*f*) Out of the members of above Committee, the number and names of persons who have been given extension of service ?

Sri VEERENDRA PATIL (Chief Minister).—

(*a*) Yes.

(i) on 4th November 1967.
(ii) Received on 9th October 1968.